ಯಾರೂ ಧೈರ್ಯ ಮಾಡ್ಲಿಲ್ಲ. ಒಂದು ಮಾರಾಚೆ ಕಾಣದಷ್ಟು ಮಳೆ ಸುರೀತಾ ಇತ್ತು. ಹೊಳೆ ಉಕ್ಕಿ, ನೆಲ ನೀರಿಂದ ಮುಚ್ಚಿ ಹೋದಾಗ ಇರ್ತಿದ್ದ ಆಟದ ಮಜ ಈ ಸಲ ಉಂಟಾಗ್ಲಿಲ್ಲ. ಎರಡೇ ದಿನದಲ್ಲಿ ಊರು ಸಮುದ್ರ ಆಯ್ತು. ನೊರೆ ನೀರು ಅಂಗಳಕ್ಕೆ ಬಂತು, ಮೆಟ್ಟಲ ಏರ್ತು, ಚಿಟ್ಟೆ ದಾಟಿ ಜಗಲಿಗೆ ಹರೀತು. ಒಲೆಗೆ ಉರಿ ಹಚ್ಚದೆ ಗರ ಬಡಿದ ಮನೆ ಜನ ಚಿಟ್ಟೆ ಮ್ಯಾಲೆ ನಿಂತಿದ್ರು. ಅಂಧಕಾರ ರಾತ್ರಿ. ಎದೆ ಗಟ್ಟಿ ಇರುವವರು ದನಗಳ ಕಣ್ಣಿ ಕಳಚಿ, ಅಟ್ಟ ಹತ್ತಿ ಕಾದರು. ಸಾಲೆ, ಬ್ಯಾಂಕು ಕದ ತೆರೀಲಿಲ್ಲ. ದೋಣಿ ಹೊರಗೆ ಬರ್ಲಿಲ್ಲ. ಇಂಥ ಕಷ್ಟದಲ್ಲಿ ಮಂಜನ ಎದೆಗಾರಿಕೆ ನೋಡ್ಬೇಕಿತ್ತು.

ಎಲ್ಲರ ಮನೆಗೆ ಹೋಗಿ ಧೈರ್ಯ ಹೇಳಿದ. ನೆಗಸಿನ ಬಗ್ಗೆ ಅವಂದೇ ಬೇರೆ ವಿಚಾರ ಇತ್ತು. ಊರವರ ದುಡ್ಡಿನ ಮದಕ್ಕೆ ಮದ್ದು ಅರೆಯೋದು, ಜಾತಿ ಜಗಳಕ್ಕೆ ಬರೆ ಹಾಕೋದು, ಹಳೇ ದ್ವೇಷ ಮರಸೋದು ಈ ನೆರೆಗೆ ಗೊತ್ತಿತ್ತು ಅಂತಿದ್ದ. ಕಪಾಟಿಗೆ ಬೀಗ ಹಾಕಿ, ಕಾರ್ ಮೇಲೆ ಓಡಾಡಿದ್ರೆ ಏನು ಬಂತು, ಎಲ್ರಿಗೂ ಜೀವ ಉಳಿಯೋದು ಮುಖ್ಯ; ಮನೆ ಸುತ್ತ ಬೇಲಿ ಹಾಕ್ಕಂಡು ಇದ್ದವರು ಕೈ ಕೈ ಹಿಡಿದು ಬಚಾವಾಗೋದಕ್ಕೆ ನೋಡಿದ್ರು. ಮಾತು ಬಿಟ್ಟವರು ಮಾತಾಡಿದ್ರು; ಮನೆಗೆ ಕಾಲು ಹಾಕದ ಹಟದವರು ಹತ್ರ ಬಂದ್ರು; ಯಾರ್‍ಯಾರದ್ದೋ ಮನೆ ಗಂಜಿ ಯಾರದ್ದೋ ಅಟ್ಟದ ಮ್ಯಾಲೆ ಮಕ್ಕಳುಹೆಂಗಸರು ಉಂಡ್ರು. ಯಾರದ್ದೋ ವಸ್ತ್ರ ಯಾರ ಮೈ ಮೇಲೋ; ಬಡವರು ಯಾರೊ ಶ್ರೀಮಂತ ಯಾರೊ ಮೇಲಿನವರಾಗ್ಲಿ ಕೆಳಗಿನವರಾಗ್ಲಿ ಎಲ್ಲಾ ಒಂದೇ ಮಾಡ್ಬಿಡ್ತು. ಸೊಕ್ಕು ಮುರಿಯೋದಕ್ಕೆ ನೆರೆ ಬೇಕು ಅಂತಿದ್ದ. ಊರವರ ಒಂದು ಹದದ ಹದ್ದು ಬಸ್ತಿಯಲ್ಲಿ ಹೊಳೆ ಇಟ್ಟಿದ್ದು ಒಳ್ಳೇದು ಎಂದು ಅವನ ನಂಬಿಕೆ.

ಹೊನ್ನಾವರದಿಂದ ಸೈನಿಕರ ದೋಣಿ ಬಂತು. ಕಸುಬಿಗಳಿಂದ ಊರ ನಾವೆಗಳ ಹೊರ ಹಾಕ್ಸಿ ತಯಾರಿ ಮಾಡಿದ. ಆ ಭಯಂಕರ ಕತ್ತಲಲ್ಲಿ ಜವಾನ್ರಿಗೆ ದೀಪ ಹಿಡ್ದು, ದಾರಿ ಕಾಣ್ಸಿ ಒಂದೊಂದೇ ಮನೆಬಿಡಾರದಿಂದ ಜನರ ದೋಣಿ ಮುಟ್ಸಿ ದಾಟ್ಸಿದ. ಕುತ್ತಿಗೆ ವರೆಗೆ ನೀರು ತುಂಬಿದ್ರೂ ಹೆದ್ರದಂವಲ್ಲ; ಬಾವಿ ಮೇಲೆ ನೀರು ನಿಂತದ್ದು ಗೊತ್ತಾಗದೆ ದೋಣಿ ಕಡೆ ಹೋಗ್ವಾಗ ಬಾವೀಲಿ ಕೆಲವರು ಬಿದ್ದು ಹೋದ್ರು; ಆ ದಿನ ಮಂಜ ಇಲ್ದಿದ್ರೆ ಅವರು ಬದಕ್ತಿರಲಿಲ್ಲ. ಮುಳಗ್ತಾ ಇದ್ದವ್ರ ಬಚಾವ್ ಮಾಡ್ದ. ಹೀಂಗೆ ಅಂವ ಎಷ್ಟು ಜನ್ರ ಜೀವ ಉಳ್ಸಿದನೊ ಲೆಕ್ಕ ಇಲ್ಲ. ತಡ ರಾತ್ರಿ ಹೊತ್ತಿಗೆ ಊರ ಜನರ ಕಳ್ಸಿ ಆಯ್ತು. ಕೊನೆ ದೋಣಿ ಏರಿ ಕೂತವನು 'ಅಲ್ಲೊಂದು ಮನೇಲಿ ಬೆಳಕು ಕಾಣ್ತಾ ಉಂಟು. ನೋಡಿ ಬರ್ತೇನೆ' ಎಂದು ದೋಣಿ ಜಿಗಿದು ಈಜತಾ ಹೋದ್ನಂತೆ." ನಂದಾಚಾರಿ ಕವಳದ ಸಂಚಿ ತರಲು ಒಳಗೆ ಹೋಗಿ ಬಂದ. ನನಗೆ ಕುತೂಹಲ ತಡೆಯಲಾಗಲಿಲ್ಲ.

"ಆಮೇಲೆ ಮಂಜಪ್ಪ ಯಾವಾಗ ಬಂದ?'

"ಆ ವಿಷಯಾ ಅವನ ಬಾಯಲ್ಲೆ ಕೇಳ್ಬೇಕು. ಜವಾನ್ರು ವಾಪಸ್ಸು ಬಂದು ಹುಡುಕಿದ್ರಂತೆ. ಪತ್ತೆಯೇ ಇಲ್ಲ, ಹೊಳೆ ಪಾಲಾಗಿರ್ಬೇಕೆಂದು ಅಂದಾಜು ಮಾಡಿ ಹೋದ್ರು. ಮಳೆ ತುಸು ಹೊಳು ಆದ್ರೂ ಹೊಳೆ ಇಳಿದಿರಲಿಲ್ಲ. ಘಟ್ಟದ ಮ್ಯಾಲೆ ಜೋರು ಹೊಡಿತಿತ್ತು. ಗಂಜಿ ಕೇಂದ್ರದಲ್ಲಿದ್ದ ಊರವರೂ ಹುಡುಕಿ ನಿರಾಸೆಯಲ್ಲೆ ಹೋದ್ರು. ಒಂದು ವಾರ ಕಳೀತು. ಮಂಜನ ಹೆಂಡ್ತಿಗೆ ಗಂಡ ಸಾಯಲಿಲ್ಲ ಎಂದು ಅಂತರಂಗದಲ್ಲಿ ಅನಿಸ್ತಿತ್ತಂತೆ. ಯಾರೊ ಕಾಯಿ ಹಿಡಿಯಲು ಬಂದವ್ರಿಗೆ ಮನೆಯೊಂದರ ಅಟ್ಟದ ಮ್ಯಾಲೆ ಮಲಗಿದ್ದ ಮಂಜ ಕಂಡ. ಆ ಮನೆಯ ಅಟ್ಟದ ಗಳಕ್ಕೆ ತೂಗಿದ ಬಾಳೆಗೊನೆಯಲ್ಲಿ ಉಳಿದಿದ್ದ ಐದಾರು ಬಾಳೆ ಹಣ್ಣು ತಿಂದು ಜೀವ ಹಿಡ್ಕಂಡಿದ್ದ. ಗುರ್ತು ಸಿಗುವಾಂಗೆ ಇರ್ಲಿಲ್ವಂತೆ. ಸೊಂಟಕ್ಕೆ ಲಂಗೋಟಿ ಮಾತ್ರ ಇತ್ತಂತೆ. ಅನ್ನ, ನಿದ್ರೆ, ಸ್ನಾನ